# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ ಭಂಡಾರಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 598 |
| ಉತ್ತರಿಸಬೇಕಾದ ದಿನಾಂಕ | : | 21-02-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆಗೆ 2022-23ನೇ ಸಾಲಿಗೆ ಸಂಬಂಧಿಸಿದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪ್ಯಾಕ್ಸ್ ಸೊಸೈಟಿಗಳು) ಪ್ರೀಮಿಯಂ ಪಾವತಿ ಮಾಡಿವೆಯೇ; (ಸಂಘವಾರು ಮತ್ತು ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 21 ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಬ್ಯಾಂಕುಗಳ ವ್ಯಾಪ್ತಿಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಹವಾಮಾನ ಆಧಾರಿತ ಬೆಳೆ ವಿಮೆಗೆ ಸಂಬಂಧಿಸಿದಂತೆ 2022-23ನೇ ಸಾಲಿಗೆ ಒಟ್ಟು 1854 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 1,21,581 ರೈತರಿಂದ ರೂ.4711.21 ಲಕ್ಷಗಳ ಪ್ರೀಮಿಯಂ ಪಾವತಿಸಿಕೊಂಡಿರುತ್ತಾರೆ.<br>ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಠೇವಣಿಯ ಎಷ್ಟು ಶೇಕಡಾ ಹಣವನ್ನು ಭದ್ರತೆಯ ದೃಷ್ಟಿಯಿಂದ ಇತರ ಬ್ಯಾಂಕ್‌ಗಳಲ್ಲಿ ಠೇವಣಿ ಇಡಬೇಕಾಗಿದೆ; ಅಂತಹ ಠೇವಣಿಯನ್ನು ಯಾವ ಬ್ಯಾಂಕ್‌ಗಳಲ್ಲಿ ಇಡಬಹುದು: (ಈ ಕುರಿತು ಸಹಕಾರಿ ನಿಯಮಗಳ ಸಹಿತ ವಿವರ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 58 ಹಾಗೂ 98ಜಿ ರ ರೀತ್ಯಾ ಸಹಕಾರ ಪತ್ತಿನ ರಚನೆಯ ಅಡಿಯಲ್ಲಿನ ಸಹಕಾರ ಸಂಘವು ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳನ್ವಯ, ಯಾವುದಾದರೂ ಅಂದರೆ, ಅವುಗಳಿಗೆ ನಿಯಂತ್ರಿಸಲ್ಪಡುತ್ತಿರುವ ಬ್ಯಾಂಕಿನಿಂದ ಯಾವುದೇ ಬ್ಯಾಂಕಿನಲ್ಲಿ ಅಥವಾ ಹಣಕಾಸು ಸಂಸ್ಥೆಯಲ್ಲಿ ತನ್ನ ನಿಧಿಗಳನ್ನು ಹೂಡಿಕೆ ಮಾಡಬಹುದು ಅಥವಾ ಠೇವಣಿ ಇಡಬಹುದು, ಆದರೆ ಆ ಸಹಕಾರ ಸಂಘವು, ತಾನು ಸಂಯೋಜನೆಗೊಂಡಿರುವಂಥ ಫೆಡರಲ್ ಸಂಘದಲ್ಲಿ ಹೂಡಿಕೆ ಮಾಡುವ ಅಥವಾ ಠೇವಣಿ ಇಡುವ ಅಗತ್ಯವಿಲ್ಲ ಎಂದಿರುತ್ತದೆ. ಠೇವಣಿಯ ಇಂತಿಷ್ಟು ಹಣವನ್ನು ಭದ್ರತೆಗಾಗಿ ಇಡಬೇಕೆಂದು ನಿಯಮವಿರುವುದಿಲ್ಲ. |
| ಇ) | ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗದ ಪ್ರಕರಣಗಳಿವೆಯೇ; ಇದ್ದಲ್ಲಿ ವಿವರ ನೀಡುವುದು; | ಸಹಕಾರ ಸಂಘಗಳಲ್ಲಿ ನಡೆದಿರುವ ಹಣದುರುಪಯೋಗದ ಪ್ರಕರಣಗಳ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಪ್ರಕರಣಗಳಿವೆಯೇ; ಆಡಳಿತ ಮಂಡಳಿಯ ಮತ್ತು ಸಿಬ್ಬಂದಿಗಳು, ಸಹಕಾರ ಇಲಾಖಾಧಿಕಾರಿಗಳು, ಇಲಾಖಾ / ಸನ್ನದು | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಹಕಾರ ಸಂಘಗಳಲ್ಲಿ ನಡೆದಿರುವ ದುರುಪಯೋಗದ ಪ್ರಕರಣಗಳು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |

| | | |
|---|---|---|
| | ಲೆಕ್ಕಪರಿಶೋಧಕರು ಹಣದುರುಪಯೋಗದಲ್ಲಿ ಒಳಗೊಂಡ ಪ್ರಕರಣಗಳೆಷ್ಟು; (ವರ್ಷವಾರು, ಸಹಕಾರಿ ಸಂಘವಾರು, ಪ್ರಕರಣವಾರು ವಿವರ ನೀಡುವುದು) | |
| ಉ) | ಸಹಕಾರಿ ಸಂಸ್ಥೆಗಳ ಹಣ ದುರುಪಯೋಗ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮಗಳೇನು; (ವಸೂಲಾತಿ ಕ್ರಮದ ವಿವರ ನೀಡುವುದು) | ಸಹಕಾರಿ ಸಂಸ್ಥೆಗಳಲ್ಲಿ ನಡೆದಿರುವ ಹಣ ದುರುಪಯೋಗ ಪ್ರಕರಣಗಳಿಗೆ ಕೈಗೊಂಡಿರುವ ಕ್ರಮದ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಊ) | ಸಹಕಾರ ಇಲಾಖೆಯ ನ್ಯಾಯಾಲಯದಲ್ಲಿ ಹಣದುರುಪಯೋಗ ನಡೆಸಿದ ಸಿಬ್ಬಂದಿಗಳನ್ನು ಆಡಳಿತ ಮಂಡಳಿ ಅಮಾನತುಗೊಳಿಸಿದ ಆದೇಶಕ್ಕೆ ತಡೆಯಾಜ್ಞೆ ನೀಡಿದೆಯೇ; (ಸಂಘವಾರು, ಜಿಲ್ಲಾವಾರು ವಿವರ ನೀಡುವುದು) | ಹಣ ದುರುಪಯೋಗ ನಡೆಸಿದ ಸಿಬ್ಬಂದಿಗಳನ್ನು ಆಡಳಿತ ಮಂಡಳಿಯು ಅಮಾನತುಗೊಳಿಸಿರುವ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ದಾಖಲಾಗಿರುವ ಒಟ್ಟು 14 ಪ್ರಕರಣಗಳಲ್ಲಿ 02 ಪ್ರಕರಣಗಳಿಗೆ ಸಹಕಾರ ಇಲಾಖೆಯ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಲಾಗಿರುತ್ತದೆ. ಸಂಘವಾರು ಮತ್ತು ಜಿಲ್ಲಾವಾರು ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. |
| ಋ) | ಈ ಇಲಾಖೆಯ ನ್ಯಾಯಾಲಯದಲ್ಲಿ ಸಹಕಾರಿ ಸಂಘಗಳ ನಿಯಮ ಕಲಂ 69 ಮತ್ತು 70ರ ಪ್ರಕಾರ ದಾಖಲಿಸುವ ವ್ಯಾಜ್ಯಗಳಿಗೆ ಇಲಾಖಾಧಿಕಾರಿಗಳು ಶುಲ್ಕ ನಿಗದಿಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಏನು ಕ್ರಮವಹಿಸಿದೆ? (ವಿವರ ನೀಡುವುದು) | ಸಹಕಾರ ಸಂಘಗಳ ನಿಬಂಧಕರ ಆದೇಶ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/ದಾವಾಶುಲ್ಕ/20/2017-18, ದಿನಾಂಕ:11-12-2017 ರನ್ವಯ ಸಹಕಾರ ಸಂಘಗಳು/ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 69 ರಡಿ ದಾಖಲಿಸುವ ಅಧಿಭಾರ ಪ್ರಕರಣಗಳು ಮತ್ತು ಕಲಂ 70 ರಡಿ ದಾಖಲಿಸುವ ದಾವಾ ಪ್ರಕರಣಗಳು ಹಾಗೂ ಆದೇಶ ಸಂಖ್ಯೆ: ಆರ್‌ಸಿಎಸ್/ಎಕ್ಸ್‌ಎಂಸಿ/ದಾವಾಶುಲ್ಕ/160/2017-18, ದಿ:08-02-2018 ರನ್ವಯ ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಕಾಯ್ದೆ 1997 ರ ಪ್ರಕರಣ 43(ಎ) ರಡಿ ದಾಖಲಿಸುವ ವ್ಯಾಜ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಶುಲ್ಕವನ್ನು ನಿಗಧಿಪಡಿಸಲಾಗಿದೆ. ಅದರನ್ವಯ ನಿಗಧಿತ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ.<br>ಆದೇಶದ ಪ್ರತಿಗಳನ್ನು **ಅನುಬಂಧ-5** ಮತ್ತು **ಅನುಬಂಧ-6** ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಸಿಒ 39 ಸಿಎಲ್‌ಎಸ್ 2023**

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:598 ಕ್ಕೆ ಮಾಹಿತಿ

ಅನುಬಂಧ-1

## 2022-23 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಬೆಳೆ ವಿಮೆ ಪ್ರೀಮಿಯಂ ಪಾವತಿಸಿದ ವಿವರ

ರೂ.ಲಕ್ಷಗಳಲ್ಲಿ

| ಕ್ರ.ಸಂ | ಜಿಲ್ಲೆಯ ಹೆಸರು | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆ | ರೈತರ ಸಂಖ್ಯೆ | ಪಾವತಿಸಿದ ಪ್ರೀಮಿಯಂ ಮೊತ್ತ |
|---|---|---|---|---|
| 1 | ಬೆಳಗಾವಿ | 0 | 0 | 0 |
| 2 | ವಿಜಯಪುರ | 188 | 831 | 105.69 |
| 3 | ಬಾಗಲಕೋಟೆ | 151 | 5288 | 109.09 |
| 4 | ಧಾರವಾಡ | 0 | 0 | 0 |
| 5 | ಗದಗ | 0 | 0 | 0 |
| 6 | ಹಾವೇರಿ | 0 | 0 | 0 |
| 7 | ಉತ್ತರ ಕನ್ನಡ | 176 | 36762 | 1191.81 |
| | **ಒಟ್ಟು** | **515** | **42881** | **1406.59** |
| 1 | ಬೆಂ.ನಗರ | 3 | 17 | 0.10 |
| 2 | ಬೆಂ.ಗ್ರಾಮಾಂತರ | 6 | 77 | 0.31 |
| 3 | ರಾಮನಗರ | 4 | 16 | 0.15 |
| 4 | ತುಮಕೂರು | 70 | 5146 | 41.47 |
| 5 | ಕೋಲಾರ | 86 | 0 | 0 |
| 6 | ಚಿಕ್ಕಬಳ್ಳಾಪುರ | 105 | 0 | 0 |
| 7 | ಚಿತ್ರದುರ್ಗ | 1 | 2 | 0.28 |
| 8 | ದಾವಣಗೆರೆ | 180 | 0 | 0 |

| | | | | |
|---|---|---|---|---|
| 9 | ಶಿವಮೊಗ್ಗ | 173 | 8167 | 304.14 |
| | **ಒಟ್ಟು** | **628** | **13425** | **346.45** |
| 1 | ಮೈಸೂರು | 0 | 0 | 0.00 |
| 2 | ಚಾಮರಾಜನಗರ | 1 | 2 | 0.02 |
| 3 | ಮಂಡ್ಯ | 0 | 0 | 0.00 |
| 4 | ಹಾಸನ | 7 | 447 | 10.71 |
| 5 | ಚಿಕ್ಕಮಗಳೂರು | 46 | 8089 | 337.34 |
| 6 | ಕೊಡಗು | 13 | 500 | 18.27 |
| 7 | ದಕ್ಷಿಣ ಕನ್ನಡ | 116 | 46206 | 2369.05 |
| 8 | ಉಡುಪಿ | 54 | 2686 | 136.40 |
| | **ಒಟ್ಟು** | **237** | **57930** | **2871.79** |
| 1 | ರಾಯಚೂರು | 128 | 2749 | 45.25 |
| 2 | ಕೊಪ್ಪಳ | 116 | 2140 | 23.35 |
| 3 | ಬೀದರ | 188 | 0 | 0 |
| 4 | ಕಲಬುರಗಿ | 20 | 1407 | 10.11 |
| 5 | ಯಾದಗಿರಿ | 14 | 950 | 5.91 |
| 6 | ಬಳ್ಳಾರಿ | 8 | 99 | 1.76 |
| | **ಒಟ್ಟು** | **474** | **7345** | **86.38** |
| | **ಕ್ರೋಢೀಕೃತ ಒಟ್ಟು** | **1854** | **1,21,581** | **4711.21** |

ಸಹಕಾರ ಸಂಘಗಳ ... ನಿಬಂಧಕರು/
ಸಹಕಾರ ಸಂಘಗಳ ಉಪನಿಬಂಧಕರು,
(ಆಡಳಿತ ಮತ್ತು ಪರಿವೀಕ್ಷಣೆ)

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 534(598) ಗೆ ಉತ್ತರ

ಅನುಬಂಧ–2

| ಕ್ರ ಸಂ | ಜಿಲ್ಲೆ | ದುರುಪಯೋಗ ಕಂಡುಬಂದಿರುವ ಸಂಘಗಳ ವಿವರ | ಅವ್ಯವಹಾರಗಳು ನಡೆದಿರುವ ವಿವರ | | | | ಇತರೆ ಅವ್ಯವಹಾರಗಳ ವಿವರ | ಕೈಗೊಂಡಿರುವ ಕ್ರಮ |
|---|---|---|---|---|---|---|---|---|
| | | | 2020–21 | | 2021–22 | | | |
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | |
| 1 | ಬೆಂಗಳೂರು. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಶಾಂತಿನಗರ, ಬೆಂಗಳೂರು. | 0 | 0 | 1 | 1527.34 | 0 | ಸಂಘದ ಆಡಳಿತ ಮಂಡಲಿ ಸದಸ್ಯರ ಅಧಿಕಾರ ದುರುಪಯೋಗ, ಕರ್ತವ್ಯ ಲೋಪ, ನಿವೇಶನ ಹಂಚಿಕೆಯಲ್ಲಿ ವಿಳಂಬ, ಆಡಳಿತಾತ್ಮಕ ಲೋಪಗಳ ಹಾಗೂ ನಿಯಬಾಹಿರ ಚಟುವಟಿಕೆಗಳ ಕಲಂ 64 ರಡಿ ವಿಚಾರಣೆ ನಡೆಸಿದ್ದು, ವಿಚಾರಣಾ ವರದಿಯನ್ವಯ ಆರೋಪಗಳು ಸಾಬೀತಾಗಿದ್ದು ಕಲಂ 68 ರಡಿ ನಿರ್ದೇಶನ ನೀಡಲಾಗಿದೆ. ವಸೂಲಾತಿಗಾಗಿ ಕಲಂ 69 ರಡಿ ಅಧಿಬಾರ ಪ್ರಕರಣ ದಾಖಲಿಸಲಾಗಿದೆ. |
| 2 | ಬೆಂಗಳೂರು. | ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ನಂ–7, ಸಂದೇಶ್ ಭವನ್, 3ನೇ ಮೈನ್, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು–560094. | 0 | 0 | 1 | 497.85 | 0 | ಸಂಘದ ಆಡಳಿತ ಮಂಡಲಿ ಸದಸ್ಯರ ಅಧಿಕಾರ ದುರುಪಯೋಗ, ಕರ್ತವ್ಯ ಲೋಪ, ನಿವೇಶನ ಹಂಚಿಕೆಯಲ್ಲಿ ವಿಳಂಬ, ಆಡಳಿತಾತ್ಮಕ ಲೋಪಗಳ ಹಾಗೂ ನಿಯಬಾಹಿರ ಚಟುವಟಿಕೆಗಳ ಕುರಿತು. ಕಲಂ 65 ರಡಿ ಪರಿವೀಕ್ಷಣೆ ನಡೆಸಿದ್ದು, ವಿಚಾರಣಾ ವರದಿಯನ್ವಯ ಆರೋಪಗಳು ಸಾಬೀತಾಗಿದ್ದು ಕಲಂ 68 ರಡಿ ನಿರ್ದೇಶನ ನೀಡಲಾಗಿದೆ. ಸಂಘವು ಸಲ್ಲಿಸಿದ್ದ ಅನುಪಾಲನಾ ವರದಿಯನ್ನು ತಿರಸ್ಕರಿಸಿ, ಆಡಳಿತ ಮಂಡಲಿ ಸದಸ್ಯರ ವಿರುದ್ಧ ಕಲಂ 29 ಸಿ ರಡಿ ಕ್ರಮವಿಡಲು ದಿನಾಂಕ:11–02–2022 ನೋಟೀಸ್ ಜಾರಿಗೊಳಿಸಲಾಗಿದ್ದು ವಿಚಾರಣೆಯು ಅಂತಿಮ ಹಂತದಲ್ಲಿರುತ್ತದೆ. |
| 3 | ಬೆಂಗಳೂರು. | ದಯಾಳನ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು | 0 | 0 | 1 | 1300.19 | 0 | ಸಂಘದ ಆಡಳಿತ ಮಂಡಲಿ ಸದಸ್ಯರ ಅಧಿಕಾರ ದುರುಪಯೋಗ, ಕರ್ತವ್ಯ ಲೋಪ, ನಿವೇಶನ ಹಂಚಿಕೆಯಲ್ಲಿ ವಿಳಂಬ, ಆಡಳಿತಾತ್ಮಕ ಲೋಪಗಳ ಹಾಗೂ ನಿಯಬಾಹಿರ ಚಟುವಟಿಕೆಗಳ ಕುರಿತು.ಕಲಂ 64 ರಡಿ ವಿಚಾರಣೆ ನಡೆಸಿದ್ದು, ವಿಚಾರಣಾ ವರದಿಯನ್ವಯ ಆರೋಪಗಳು ಸಾಬೀತಾಗಿದ್ದು, ದಿನಾಂಕ: 17–09–2021 ರಂದು ಕಲಂ 68 ರಡಿ ನಿರ್ದೇಶನ ನೀಡಲಾಗಿದೆ. ದಿನಾಂಕ: 28–09–2021 ರಂದು ಕಲಂ 69 ರಡಿ ವಸೂಲಾತಿಗಾಗಿ ಅಧಿಬಾರ ಪ್ರಕರಣ ಹಾಗೂ ದಿನಾಂಕ: 11–01–2022 ರಂದು 109 ರಡಿ ಕ್ರಿಮಿನಲ್ ಕ್ರಮ ದಾಖಲಿಸಲಾಗಿದೆ. |
| 4 | ಬೆಂಗಳೂರು. | ವಿಜಯಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು | 0 | 0 | 1 | 133.52 | 0 | ಸಂಘದ ಆಡಳಿತ ಮಂಡಲಿ ಸದಸ್ಯರ ಅಧಿಕಾರ ದುರುಪಯೋಗ, ಕರ್ತವ್ಯ ಲೋಪ, ನಿವೇಶನ ಹಂಚಿಕೆಯಲ್ಲಿ ವಿಳಂಬ, ಆಡಳಿತಾತ್ಮಕ ಲೋಪಗಳ ಹಾಗೂ ನಿಯಬಾಹಿರ ಚಟುವಟಿಕೆಗಳ ಕುರಿತು.ಕಲಂ 64 ರಡಿ ವಿಚಾರಣೆ ನಡೆಸಿದ್ದು, ವಿಚಾರಣಾ ವರದಿಯನ್ವಯ ಆರೋಪಗಳು ಸಾಬೀತಾಗಿದ್ದು, ದಿನಾಂಕ: 15–10–2022 ರಂದು ಕಲಂ 68 ರಡಿ ನಿರ್ದೇಶನ ನೀಡಲಾಗಿದೆ. ದಿನಾಂಕ: 02–12–2022 ರಂದು ಕಲಂ 29–ಸಿ ರಡಿ ಪ್ರಕರಣವನ್ನು ದಾಖಲಿಸಲಾಗಿದೆ. |

| | | | | | | | | |
|---|---|---|---|---|---|---|---|---|
| 5 | ಬೆಂಗಳೂರು. | ಡಿ ಗ್ರೂಪ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು | 0 | 0 | 1 | 397.96 | 0 | ಸಂಘದ ಆಡಳಿತ ಮಂಡಲಿ ಸದಸ್ಯರು ಮತ್ತು ಕಾರ್ಯದರ್ಶಿ ಅಧಿಕಾರ ದುರುಪಯೋಗ, ಕರ್ತವ್ಯ ಲೋಪ, ನಿವೇಶನ ಹಂಚಿಕೆಯಲ್ಲಿ ವಿಳಂಬ, ಆಡಳಿತಾತ್ಮಕ ಲೋಪಗಳ ಹಾಗೂ ನಿಯಬಾಹಿರ ಚಟುವಟಿಕೆಗಳ ಕುರಿತು ಕಲಂ 65 ರಡಿ ಪರಿವೀಕ್ಷಣೆ ನಡೆಸಿದ್ದು, ಪರಿವೀಕ್ಷಣೆ ವರದಿಯನ್ವಯ ಆರೋಪಗಳು ಸಾಬೀತಾಗಿದ್ದು, ದಿನಾಂಕ: 22-07-2022 ರಂದು ಕಲಂ 68 ರಡಿ ನಿರ್ದೇಶನ ನೀಡಲಾಗಿದೆ.ದಿನಾಂಕ: 13-09-2022 ರಂದು ಕಲಂ 69 ರಡಿ ವಸೂಲಾತಿಗಾಗಿ ಅಧಿಬಾರ ಪ್ರಕರಣವನ್ನು ದಾಖಲಿಸಲಾಗಿದೆ. |
| 6 | ಬೆಂಗಳೂರು. | ವಿದ್ಯಾಗಿರಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು | 0 | 0 | 1 | 5313.13 | 0 | ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಯು ಸಂಘದ ನಿವೇಶನಗಳನ್ನು ಕನಿಷ್ಠ ಮೌಲ್ಯಕ್ಕೆ ಸದಸ್ಯರಲ್ಲದವರಿಗೆ ಮಾರಾಟ ಮಾಡಿ ಸಂಘಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆಕಲಂ 65 ರಡಿ ಪರಿವೀಕ್ಷಣೆ ನಡೆಸಿದ್ದು, ಪರಿವೀಕ್ಷಣೆ ವರದಿಯನ್ವಯ ಆರೋಪಗಳು ಸಾಬೀತಾಗಿದ್ದು, ದಿನಾಂಕ: 19-06-2021 ರಂದು ಕಲಂ 68 ರಡಿ ನಿರ್ದೇಶನ ನೀಡಲಾಗಿದೆ. ದಿನಾಂಕ: 03-06-2022 ರಂದು ಕಲಂ 69 ರಡಿ ವಸೂಲಾತಿಗಾಗಿ ಅಧಿಬಾರ ಪ್ರಕರಣ ಹಾಗೂ ದಿನಾಂಕ: 02-09-2022 ರಂದು ಕಲಂ 29-ಸಿ ರಡಿ ಕ್ರಮ ಕೈಗೊಳ್ಳಲಾಗಿದೆ |
| 7 | ಬೆಂಗಳೂರು. | ಶ್ರೀ ಮಹಾವಿಷ್ಣು ವಿವಿದೊದ್ದೇಶ ಸಹಕಾರ ಸಂಘ ನಿ, ಬೆಂಗಳೂರು | 0 | 0 | 0 | 0 | 1 | ಚೀಟಿ ವ್ಯವಹಾರ ನಡೆಸಿ ಚೀಟಿ ಮೊತ್ತವನ್ನು ಗ್ರಾಹಕರಿಗೆ ಹಿಂತಿರುಗಿಸದೆ ಮೋಸವೆಸಗಿರುತ್ತಾರೆಂದು ಆರ್.ಟಿ.ನಗರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೋಲಿಸ್ ಇಲಾಖೆಯ ಅಧಿಕಾರಿಗಳು ತನಿಖೆ ನಡೆಸಲಿ ತಿಳಿಸಿರುತ್ತಾರೆ. ಆದ್ದರಿಂದ ಕಲಂ 64ರಡಿ ವಿಚಾರಣೆ ನಡೆಸಲು ಆದೇಶಿಸಲಾಗಿದೆ. |
| 8 | ರಾಮನಗರ | ಟಿ.ಎ.ಪಿ.ಎಂ.ಸಿ.ಎಸ್. ಕನಕಪುರ | 0 | 0 | 1 | 315.43 | 0 | ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ಸಿಸಿ ನಂ. 35/22 ರಂತೆ ವಸೂಲಾತಿಗಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿರುತ್ತದೆ. |
| 9 | ಕೋಲಾರ | ಹುತ್ತೂರು ಹೋಬಳಿ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿ. ಕೋಲಾರ | 0 | 0 | 1 | 139.29 | 0 | ಆಡಳಿತ ಮಂಡಲಿಯು ವಸೂಲಾತಿಗೆ ಕ್ರಮವಿಟ್ಟಿರುತ್ತದೆ. |
| 10 | ಚಿಕ್ಕಬಳ್ಳಾಪುರ | ಪಿ.ಎಲ್.ಡಿ ಬ್ಯಾಂಕ್ ಶಿಡ್ಲಘಟ್ಟ | 0 | 0 | 1 | 32.61 | 0 | ಕಲಂ 70 ರಡಿ ದಾವೆ ದಾಖಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿದೆ. |
| 11 | ತುಮಕೂರು | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಅರಕೆರೆ ತುಮಕೂರು | 1 | 24.52 | 0 | 0 | 0 | ವಸೂಲಾತಿಗಾಗಿ ಕಲಂ 69ರ ಅಧಿಬಾರ ಅರ್ಜಿ ವಿಚಾರಣೆಯಲ್ಲಿದೆ. |

| | | | | | | | | |
|---|---|---|---|---|---|---|---|---|
| 12 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಾವಿನಹಳ್ಳಿ, ಗುಬ್ಬಿ ತಾಲ್ಲೂಕು | 0 | 0 | 1 | 4.76 | 0 | ವಸೂಲಾತಿಗಾಗಿ ಕಲಂ 69ರ ಅಧಿಬಾರ ಅರ್ಜಿ ವಿಚಾರಣೆಯಲ್ಲಿದೆ. |
| 13 | ಶಿವಮೊಗ್ಗ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಜಾವಳ್ಳಿ ಶಿವಮೊಗ್ಗ ತಾಲ್ಲೂಕು | 1 | 34.92 | 0 | 0 | 0 | ಕಲಂ 64ರ ವಿಚಾರಣೆ ಜರುಗಿಸಲಾಗುತ್ತಿದೆ. |
| 14 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮೀರಾಪುರ ಶಿವಮೊಗ್ಗ ತಾಲ್ಲೂಕು | 0 | 0 | 1 | 6.05 | 0 | ದುರುಪಯೋಗ ಪಡಿಸಿಕೊಂಡಿರುವವರ ವಿರುದ್ಧ ಆಡಳಿತ ಮಂಡಲಿಯವರು ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುತ್ತಾರೆ. |
| 15 | | ಇಂಡಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ. ಸೊರಬ ತಾಲ್ಲೂಕು | 1 | 0.8 | 0 | 0 | 0 | ರೂ. 0.40 ವಸೂಲಿಯಾಗಿದ್ದು, ಉಳಿದ ಮೊತ್ತವನ್ನು ವಸೂಲಿ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. |
| 16 | | ಟಿ.ಎ.ಪಿ.ಎಂ.ಸಿ.ಎಸ್. ಸೊರಬ | 1 | 17.4 | 0 | 0 | 0 | ವಸೂಲಾತಿಗಾಗಿ ಕ್ರಮವಿಡಲು ಕಲಂ 68ರ ಆದೇಶ ಹೊರಡಿಸಿದೆ. |
| 17 | | ಬನಸಿರಿ ಮಹಿಳಾ ಪತ್ತಿನ ಸಹಕಾರ ಸಂಘ ನಿ., ಶಿಕಾರಿಪುರ | 1 | 6.58 | 0 | 0 | 0 | ವಸೂಲಾತಿಗಾಗಿ ಕ್ರಮವಿಡಲು ದಿನಾಂಕ 19-09-2022 ರಂದು ಕಲಂ 68ರ ಆದೇಶ ಹೊರಡಿಸಿದೆ. ಅಪರಾಧ ಸಂಖ್ಯೆ: 64/2022 ಸಕ್ಷಮ ಪ್ರಾಧಿಕಾರದಲ್ಲಿ ದಾಖಲಾಗಿರುತ್ತದೆ. |
| | | **ಪ್ರಾಂತದ ಒಟ್ಟು** | **5** | **84.22** | **11** | **9668.13** | 1 | |
| 18 | ಮೈಸೂರು | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಾಕೋಡು, ಪಿರಿಯಾಪಟ್ಟಣ ತಾಲ್ಲೂಕು | 1 | 22.07 | 0 | 0.00 | 0 | ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ನಿರ್ದೇಶನ ನೀಡಲಾಗಿರುತ್ತದೆ. |
| 19 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ರಾವಂದೂರು, ಪಿರಿಯಾಪಟ್ಟಣ ತಾಲ್ಲೂಕು | 1 | 6.0 | 0 | 0.00 | 0 | ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ನಿರ್ದೇಶನ ನೀಡಲಾಗಿರುತ್ತದೆ. |
| 20 | | ಸ್ನೇಹ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು | 0 | 0 | 0 | 0 | 1 | ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿದೆ. ಕಲಂ 64 ರ ವಿಚಾರಣಾಧಿಕಾರಿಗಳು ದಿನಾಂಕ: 15.12.2022 ರಂದು ವರದಿಯನ್ನು ಸಲ್ಲಿಸಿದ್ದು, ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ. |
| 21 | | ಮೈಸೂರು ಜಿಲ್ಲಾ ಅರಣ್ಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು | 0 | 0 | 0 | 0 | 1 | ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣೆ ಪ್ರಗತಿಯಲ್ಲಿರುತ್ತದೆ. |

| | | | | | | | |
|---|---|---|---|---|---|---|---|
| 22 | | ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು | 0 | 0 | 0 | 0 | 1 | ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿದೆ. ಗೌರವ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 5342/2022 (ಸಿಎಸ್)ರನ್ವಯ ಕಲಂ 64 ರ ಆದೇಶಕ್ಕೆ ತಡೆಯಾಜ್ಞೆ ಇರುತ್ತದೆ. |
| 23 | | ಬಿ.ಇ.ಎಂ.ಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು | 0 | 0 | 0 | 0 | 1 | ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ 65 ರಡಿ ವಿಚಾರಣೆಗೆ ಆದೇಶಿಸಲಾಗಿದೆ. ಕಲಂ 65 ರ ವಿಚಾರಣಾಧಿಕಾರಿಗಳು ದಿನಾಂಕ: 21.05.2022 ರಂದು ವರದಿಯನ್ನು ಸಲ್ಲಿಸಿದ್ದು, ವರದಿಯನ್ವಾದರಿಸಿ ಕಲಂ 68ರ ಆದೇಶ/ನಿರ್ದೇಶನ ಹೊರಡಿಸಿದ್ದು, ಸದರಿ ಆದೇಶಕ್ಕೆ ಸಂಘದಿಂದ ದಿನಾಂಕ: 02.11.2022 ರಂದು ಅನುಪಾಲನಾ ವರದಿಯನ್ನು ಸಲ್ಲಿಸಿದ್ದು, ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ. |
| 24 | | ಕೇಂದ್ರ ಶಿಕ್ಷಣ ಸಚಿವಾಲಯ ನೌಕರರ ಪತ್ತಿನ ಸ.ಸಂಘ ನಿ, ಮೈಸೂರು | 1 | 79.79 | 0 | 0 | 0 | |
| 25 | ಮೈಸೂರು | ಭೂತಗಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ | 1 | 5.48 | 0 | 0 | 0 | ಹಣ ದುರುಪಯೋಗದ ಮೊತ್ತ ಸಂಘಕ್ಕೆ ಪಾವತಿ ಮಾಡುವ ಸಂಬಂಧ, ಸಂಘದಿಂದ ದಾವಾ ದಾಖಲಿಸಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ರಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಮಲ್ಜಾರಿ ಕ್ರಮಕ್ಕಾಗಿ ಸಿವಿಲ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ |
| 26 | | ನಾಗಣಾಪುರ ಹಾಲು ಉತ್ಪಾದಕರ ಸಹಕಾರ ಸಂಘ ನಿ | 0 | 0 | 1 | 1.94 | 0 | ಹಣ ದುರುಪಯೋಗದ ಮೊತ್ತ ಸಂಘಕ್ಕೆ ಪಾವತಿ ಮಾಡುವ ಸಂಬಂಧ, ಸಂಘದಿಂದ ದಾವಾ ದಾಖಲಿಸಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ರಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಮಲ್ಜಾರಿ ಕ್ರಮಕ್ಕಾಗಿ ಸಿವಿಲ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ |
| 27 | | ಕೀಳನಪುರ ಹಾಲು ಉತ್ಪಾದಕರ ಸಹಕಾರ ಸಂಘ ನಿ | 0 | 0 | 1 | 6.00 | 0 | ಹಣ ದುರುಪಯೋಗದ ಮೊತ್ತ ಸಂಘಕ್ಕೆ ಪಾವತಿ ಮಾಡುವ ಸಂಬಂಧ, ಸಂಘದಿಂದ ದಾವಾ ದಾಖಲಿಸಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ರಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಮಲ್ಜಾರಿ ಕ್ರಮಕ್ಕಾಗಿ ಸಿವಿಲ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ |
| 28 | | ಕುಳ್ಳನಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘ ನಿ | 0 | 0 | 1 | 1.91 | 0 | ಹಣ ದುರುಪಯೋಗದ ಮೊತ್ತ ಸಂಘಕ್ಕೆ ಪಾವತಿ ಮಾಡುವ ಸಂಬಂಧ, ಸಂಘದಿಂದ ದಾವಾ ದಾಖಲಿಸಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ರಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಮಲ್ಜಾರಿ ಕ್ರಮಕ್ಕಾಗಿ ಸಿವಿಲ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ |

| | | | | | | | | |
|---|---|---|---|---|---|---|---|---|
| 29 | | ಚಂದಗಾಲು (ದುದ್ದ ಹೋಬಳಿ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., (ದುದ್ದ ಹೋಬಳಿ) | 1 | 15.10 | 0 | 0.00 | 0 | 69 ರಡಿ ದಾವಾ ದಾಖಲಾಗಿರುತ್ತದೆ. |
| 30 | | ಅಕ್ಕಿಹೆಬ್ಬಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., | 0 | 0 | 1 | 17.36 | 0 | ಸಿವಿಲ್ ಕ್ರಮ |
| 31 | | ಮುರುಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., | 0 | 0 | 1 | 9.41 | 0 | ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ನಿರ್ದೇಶನ ನೀಡಲಾಗಿರುತ್ತದೆ. |
| 32 | | ಮಹದೇವಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., | 0 | 0 | 1 | 22.50 | 0 | ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ನಿರ್ದೇಶನ ನೀಡಲಾಗಿರುತ್ತದೆ. |
| 33 | | ಬಲ್ಲೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., | 0 | 0 | 1 | 27.49 | 0 | ಸಿವಿಲ್ ಕ್ರಮ |
| 34 | | ಪಾಂಡವಪುರ ತಾಲ್ಲೂಕು ಗೃಹ ನಿರ್ಮಾಣ ಸಹಕಾರ ಸಂಘ ನಿ, ಪಾಂಡವಪುರ | 0 | 0 | 0 | 0 | 1 | ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿದೆ. ಗೌರವ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 3215/2022 ರನ್ವಯ ಕಲಂ 64 ರ ಆದೇಶಕ್ಕೆ ತಡೆಯಾಜ್ಞೆ ಇರುತ್ತದೆ. |
| 35 | ಚಿಕ್ಕಮಗಳೂರು | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹಿರೇಮಗಳೂರು | 1 | 119.16 | 0 | 0 | 0 | ಈ ಸಂಘದಲ್ಲಿ ನಡೆದ ಅವ್ಯವಹಾರದ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಅಡಿಯಲ್ಲಿ ವಿಚಾರಣೆ ನಡೆಸಿ, ವಿಚಾರಣಾ ವರದಿ ಯನ್ವಯ ಹಣ ದುರುಪಯೋಗ ಮಾಡಿದ ಸಂಘದ ಹಿಂದಿನ ಕಾರ್ಯದರ್ಶಿ ಹಾಗೂ ಲೆಕ್ಕಿಣಿಗರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಕೈಗೊಳ್ಳಲಾಗಿರುತ್ತದೆ ಮತ್ತು ಸದರಿ ನೌಕರರನ್ನು ಅಮಾನತ್ತು ಗೊಳಿಸಲಾಗಿರುತ್ತದೆ. |
| 36 | ಕೊಡಗು | ಸುಂಟಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕುಶಾಲನಗರ ತಾ॥ | 0 | 0 | 1 | 5.43 | 0 | ಸಂಘದ ಅವ್ಯವಹಾರಗಳ ವಿರುದ್ಧ ವಸೂಲಾತಿಗೆ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಕೈಗೊಳ್ಳಲಾಗಿರುತ್ತದೆ. |
| 37 | | ಬೈರಂಬಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ವೀರಾಜಪೇಟೆ ತಾ | 1 | 13.72 | 0 | 0 | 0 | |

| | | | | | | | | |
|---|---|---|---|---|---|---|---|---|
| 38 | ಹಾಸನ | ಹಾಸನ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಾಸನ | 0 | 0 | 0 | 0 | 1 | ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ. 64 ರಡಿ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣೆ ಪ್ರಗತಿಯಲ್ಲಿರುತ್ತದೆ. |
| 39 | ಉಡುಪಿ | ಟೀಚರ್ಸ್ ಕೋ-ಅಪರೇಟಿವ್ ಬ್ಯಾಂಕ್ ನಿ., ಉಡುಪಿ | 1 | 69.61 | 0 | 0 | 0 | ಸಂಪೂರ್ಣವಾಗಿ ವಸೂಲಿಯಾಗಿದೆ. |
| 40 | ಉಡುಪಿ | ಭಿರ್ತಿ ಕ್ರೆಡಿಟ್ ಕೋ.ಆಪರೇಟೀವ್ ಸೊಸೈಟಿ ಲಿ, ಬಿರ್ತಿ | 1 | 26.71 | 0 | 0 | 0 | ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಆಡಳಿತ ಮಂಡಳಿಗೆ ನೋಟೀಸು ನೀಡಲಾಗಿದೆ. |
| 41 | ದಕ್ಷಿಣ ಕನ್ನಡ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಗುರುಪುರ | 1 | 112.96 | 0 | 0 | 0 | ಸಹಕಾರ ಸಂಘದ ಸಿಬ್ಬಂದಿಗಳಾದ ಕಮಲಾಕ್ಷ ಎನ್.ಜಿ. ಅಕೌಂಟೆಂಟ್, ರಾಘವ ಸಾಲಿಯಾನ್, ಹಿರಿಯ ಗುಮಾಸ್ತ, ವಿಠಲ ಎ., ಶಾಖೆಯ ಅಧಿಕಾರಿ, ರಾಘವೇಂದ್ರ, ಸ್ಟೋರ್ ವಿಭಾಗ ನೌಕರರುಗಳು ಹಣದುರುಪಯೋಗ ಮಾಡಿದ್ದು, ದಿನಾಂಕ:12-01-22 ರಂದು ಆಡಿಟ್ ವರದಿ ಸ್ವೀಕೃತವಾಗಿದ್ದು, ದಿನಾಂಕ: 08-02-2022ರಂದು ಕಲಂ:68ರ ಆದೇಶ ಹೊರಡಿಸಿದೆ. ದಿನಾಂಕ:03-03-2022 ರಂದು ಕಲಂ:64ರ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿದೆ ಎಂದು ಸಹಕಾರ ಸಂಘಗಳ ಸಹಾಯಕ ನಿಬಧಂಕರು, ಮಂಗಳೂರುರವರು ತಿಳಿಸಿರುತ್ತಾರೆ. |
| 42 | ದಕ್ಷಿಣ ಕನ್ನಡ | ಪುತ್ತೂರು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ, ನೆಲ್ಯಾಡಿ, | 1 | 27.14 | 0 | 0 | 0 | ದುರುಪಯೋಗವಾಗಿರುವುದು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿದ್ದು, ವಸೂಲಿಗೆ ಕ್ರಮವಹಿಸುವಂತೆ ಸಂಘಕ್ಕೆ ನಿರ್ದೇಶಿಸಲಾಗಿರುತ್ತದೆ. |
| 43 | ಮಂಡ್ಯ | ಅಂಬಿಗರಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೆ.ಆರ್.ಪೇಟೆ | 1 | 3.99 | 0 | 0.00 | 0 | ಸಿವಿಲ್ ಕ್ರಮ . |
| 44 | | ಬಂಡಬೋವಿನ ಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೆ.ಆರ್.ಪೇಟೆ | 1 | 7.41 | 0 | 0.00 | 0 | ಸಿವಿಲ್ ಕ್ರಮ |
| 45 | | ಗಂಜಾಂ ಹಾಲು ಉತ್ಪಾದಕರ ಸಹಕಾರ ಸಂಘ ನಿ., | 0 | 0 | 1 | 7.28 | 0 | ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ನಿರ್ದೇಶನ ನೀಡಲಾಗಿರುತ್ತದೆ. |
| 46 | ದಕ್ಷಿಣ ಕನ್ನಡ | ಉಜಿರೆ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ., ಉಜಿರೆ, ಬೆಳ್ತಂಗಡಿ | 1 | 84.82 | 0 | 0 | 0 | ಚಂದ್ರಶೇಖರ್, ಕಾರ್ಯದರ್ಶಿಯವರು ಹಣದುರುಪಯೋಗಗೊಳಿಸಿರುವ ಬಗ್ಗೆ ದಿನಾಂಕ:27.08.2021 ರಂದು ಸಂಘದಲ್ಲಿ ನಡೆದಿದೆ ಎನ್ನಲಾದ ಹಣದುರುಪಯೋಗದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ಮೇರೆಗೆ ಸಂಘದ ಅಧ್ಯಕ್ಷರಿಗೆ ದಿನಾಂಕ:30.08.2021 ರಂದು ಪತ್ರ ಬರೆದು ತಪ್ಪಿತಸ್ಥ ನೌಕರರ ವಿರುದ್ಧ ಸಿವಿಲ್ / ಕ್ರಿಮಿನಲ್ ಪ್ರಕರಣ ದಾಖಲಿಸಿ ವರದಿಸಲು ತಿಳಿಸಲಾಗಿದೆ. ದಿನಾಂಕ:08.09.2021 ರಂದು ಸಂಘದ ಅಧ್ಯಕ್ಷರು ಪತ್ರ ಬರೆದು ಆರಕ್ಷಕ ಠಾಣಾಧಿಕಾರಿಗಳು, ಬೆಳ್ತಂಗಡಿ ಇಲ್ಲಿ ದಿನಾಂಕ:25.08.2021 ರಂದು ಸಂಘದ ನೌಕರರಾದ ಶ್ರೀ ಚಂದ್ರಶೇಖರರು ಇವರ ವಿರುದ್ಧ ದೂರನ್ನು ದಾಖಲಿಸಲಾಗಿರುತ್ತದೆ |

| | | | | | | | | |
|---|---|---|---|---|---|---|---|---|
| 47 | ದಕ್ಷಿಣ ಕನ್ನಡ | ಪುತ್ತೂರು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ, ನೆಲ್ಯಾಡಿ, | 1 | 27.14 | 0 | 0 | 0 | ದುರುಪಯೋಗವಾಗಿರುವುದು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿದ್ದು, ವಸೂಲಿಗೆ ಕ್ರಮವಹಿಸುವಂತೆ ಸಂಘಕ್ಕೆ ನಿರ್ದೇಶಿಸಲಾಗಿರುತ್ತದೆ. |
| 49 | | ಕುರ್ನಾಡು ಹಾಲು ಉತ್ಪಾದಕರ ಸಹಕಾರ ಸಂಘ ನಿ. ಬಂಟ್ವಾಳ ತಾಲೂಕು | 1 | 1.25 | 0 | 0 | 0 | |
| 50 | ಉಡುಪಿ | ಹಾಲು ಉತ್ಪಾದಕರ ಸಹಕಾರ ಸಂಘ ನಿ. ಹಿರ್ತಾಡಿ | 1 | 3.1 | 0 | 0 | 0 | ದುರುಪಯೋಗವಾಗಿರುವುದು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿದ್ದು, ವಸೂಲಿಗೆ ಕ್ರಮವಹಿಸುವಂತೆ ಸಂಘಕ್ಕೆ ನಿರ್ದೇಶಿಸಲಾಗಿರುತ್ತದೆ. |
| 51 | | ಹಾಲು ಉತ್ಪಾದಕರ ಸಹಕಾರ ಸಂಘ ನಿ. ಮರವಂತೆ | 0 | 0 | 1 | 2.56 | 0 | ಹಣ ದುರುಪಯೋಗದ ಮೊತ್ತವನ್ನು ಸಂಘಕ್ಕೆ ಪಾವತಿಸಲು ಕಲಂ69ರಡಿಯಲ್ಲಿ ತೀರ್ಪು ನೀಡಲಾಗಿದೆ. |
| 52 | | ಹಾಲು ಉತ್ಪಾದಕರ ಸಹಕಾರ ಸಂಘ ನಿ. ಯಡ್ತಾಡಿ, | 0 | 0 | 1 | 3.1 | 0 | ಕಲಂ69ರ ರೀತ್ಯಾ ಅಧಿಭಾರ ಅರ್ಜಿಯನ್ನು ದಾಖಲಿಸಲು ನೋಟೀಸು ನೀಡಲಾಗಿರುತ್ತದೆ. |
| 53 | ಉಡುಪಿ | ಅಳ್ವೆಗದ್ದೆ ಮಹಿಳಾ ಮೀನುಗಾರರ ಸಹಕಾರ ಸಂಘ ನಿ., ಶಿರೂರು, | 1 | 2.42 | 0 | 0 | 0 | |
| 54 | ಉಡುಪಿ | ಮೂರ್ತೆದಾರರ ಸೇವಾ ಸಹಕಾರ ಸಂಘ ನಿ., ನಾವುಂದ | 1 | 126.79 | 0 | 0 | 0 | ಸಂಪೂರ್ಣವಾಗಿ ವಸೂಲಿಯಾಗಿದೆ. |
| | **ಪ್ರಾಂತದ ಒಟ್ಟು** | | **19** | **754.66** | **11** | **104.98** | **6** | ಮೂರ್ತೆದಾರರ ಸೇವಾ ಸಹಕಾರ ಸಂಘ ನಿ., ನಾವುಂದ ಈ ಸಂಘದ ಹಣ ದುರುಪಯೋಗಪಡಿಸಿದ ಹಿಂದಿನ ಕಾರ್ಯದರ್ಶಿ ಆಂಶಿಕ ಮೊತ್ತವನ್ನು ಮರುಪಾವತಿಸಿರುವುದರಿಂದ ಸಂಪೂರ್ಣ ಮೊತ್ತವನ್ನು ಮರುಪಾವತಿಸುವಂತೆ ನೋಟೀಸು ನೀಡಲಾಗಿರುತ್ತದೆ. |
| 55 | ಬೆಳಗಾವಿ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೆನ್ನಾಡಿ | 1 | 19.26 | 0 | 0.00 | 0 | |
| 56 | | ಸಿದ್ದಭೈರವನಾಥ ಕೋ–ಆಪರೇಟಿವ್ ಸೊಸೈಟಿ ಬೆಳಗಾವಿ | 0 | 0.00 | 1 | 13.57 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೆನ್ನಾಡಿ ಸಂಘದ 2020–21 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಹಣದುರುಪಯೋಗ ಕಂಡುಬಂದಿದ್ದು ಹಣದುರುಪಯೋಗದ ಮೊತ್ತದ ವಸೂಲಾತಿಗೆ ಸಂಬಂಧಿಸಿದಂತೆ ಸಂಘದವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 69 ರಡಿ ದಾವಾ ಪ್ರಕರಣ ಸಂಖ್ಯೆ ಎಆರ್11/ ಎಬಿಎನ್/ಡಿ/ಡಿ.ಡಿ.ಎಸ್/01/2022–23 ಅನ್ನು ದಾಖಲು ಮಾಡಿದ್ದು ಸದರ ಪ್ರಕರಣದಲ್ಲಿ ಸಂಘದ ಹಿಂದಿನ ಕಾರ್ಯದರ್ಶಿಯವರು ಮೃತರಾದ ಕಾರಣ ಅವರ ವಾರಸುದಾರರನ್ನು ಪ್ರಕರಣದಲ್ಲಿ ದಾಖಲೆಗೆ ತರಲು ಕ್ರಮವಿಟ್ಟಿರುತ್ತಾರೆ. ಆಪಾದಿತರು ಮೃತರಾದ ಕಾರಣ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುವುದಿಲ್ಲ. |

| | | | | | | | | |
|---|---|---|---|---|---|---|---|---|
| 57 | | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಪತ್ತಿನ ಸಹಕಾರ ಸಂಘ ಬೆಳಗಾವಿ | 1 | 272.56 | 0 | 0.00 | 0 | ಸಿದ್ಧಭೈರವನಾಥ ಕೋ-ಆಪರೇಟಿವ್ ಸೊಸೈಟಿ ಬೆಳಗಾವಿ ಈ ಸಂಘದ ಸನ್ 2021-22 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಹಣದುರುಪಯೋಗ ಕಂಡು ಬಂದಿದ್ದು ಸಂಘದವರು ಹಿಂದಿನ ಕಾರ್ಯದರ್ಶಿ ವಿರುದ್ಧ ಬೆಳಗಾವಿ ನಗರದ ಖಡೇ ಬಜಾರ ಪೋಲಿಸ್ ಠಾಣೆಯಲ್ಲಿ ದಿನಾಂಕ : 03-08-2021 ರಂದು ಅಪರಾದ ಸಂಖ್ಯೆ : 54/2021 ರಂದು ದಾಖಲು ಮಾಡಿರುತ್ತಾರೆ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗಿದೆ. ಸಿವಿಲ್ ಕ್ರಮ ಜರುಗಿಸಲು ಆಡಳಿತ ಮಂಡಳಿಯವರಿಗೆ ಸೂಚಿಸಲಾಗಿದೆ. |
| 58 | | ಯಶ್ ಮಲ್ಟಿಪರಪಸ್ ಕೋ-ಆಪ್ ಸೊಸೈಟಿ ಲಿ., ಬೆಳಗಾವಿ | 0 | 0.00 | 1 | 24.00 | 0 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಪತ್ತಿನ ಸಹಕಾರ ಸಂಘ ಬೆಳಗಾವಿ ರ ಕಲಂ 64 ರ ವಿಚಾರಣಾ ವರದಿಯಲ್ಲಿ ಹಣ ದುರುಪಯೋಗ ಕಂಡುಬಂದಿದ್ದು ಹಣದುರುಪಯೋಗದ ಮೊತ್ತದ ವಸೂಲಾತಿಗೆ ಸಂಬಂಧಿಸಿದಂತೆ ಸಂಘದವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 69 ರಡಿ ದಾವಾ ಪ್ರಕರಣ ಸಂಖ್ಯೆ ಡಿಆರ್‌ಎಲ್/ ಎಬಿಎನ್/ ಎಸ್‌ಯುಆರ್/ 02/2021-22 ಅನ್ನು ದಾಖಲು ಮಾಡಿದ್ದು ಸದರ ಪ್ರಕರಣದಲ್ಲಿ ಸಂಘದ ಹಿಂದಿನ ಅಧ್ಯಕ್ಷರಾದ ಶ್ರೀ. ನಾತಾಜೀ ಪಿ. ಪಾಟೀಲ ಇವರ ಹಾಗೂ ಅವರ ಪತ್ನಿಯವರ ಹೆಸರಿನಲ್ಲಿರುವ ಆಸ್ತಿಯ ಮೇಲೆ ಮುಟ್ಟುಗೋಲು ಆದೇಶವನ್ನು ಹೊರಡಿಸಲಾಗಿದೆ. ಆಪಾದಿತರ ವಿರುದ್ಧ ಸಂಘದವರು ಬೆಳಗಾವಿ ನಗರ ಸಿ.ಎಸ್.ಎಸ್ ಪೋಲಿಸ್ ಠಾಣೆಯಲ್ಲಿ ದಿನಾಂಕ : 30-01-2022 ರಂದು ಎಫ್‌ಆಯ್‌ಆರ್ ನಂ. 11/2022 ಅನ್ನು ದಾಖಲುಮಾಡಿರುತ್ತಾರೆ. |
| 59 | ವಿಜಯಪುರ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ,ಇಂಗಳೇಶ್ವರ | 1 | 60.97 | 0 | 0.00 | 0 | ಯಶ್ ಮಲ್ಟಿಪರಪಸ್ ಕೋ-ಆಪ್ ಸೊಸೈಟಿ ಲಿ., ಬೆಳಗಾವಿ ಈ ಸಂಘದ 2021-22 ನೇ ಸಾಲಿನ ಲೆಕ್ಕ ಪರೀಶೋಧನಾ ವರದಿಯಲ್ಲಿ ಹಣದುರುಪಯೋಗ ಕಂಡುಬಂದಿದ್ದು ಸಿವಿಲ್ ಹಾಗೂ ಕ್ರಿಮಿನಲ್ ಕ್ರಮ ಜರುಗಿಸಲು ಆಡಳಿತ ಮಂಡಳಿಯವರಿಗೆ ಸೂಚಿಸಲಾಗಿದೆ. |
| 60 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ,ಕವಲಗಿ | 1 | 81.62 | 0 | 0.00 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಇಂಗಳೇಶ್ವರ ಸಂಘದ ಅಡಿಟ್ ವರದಿ ಸನ್ 2020-21ರನ್ವಯ ಬೆಳಕಿಗೆ ಬಂದಿರುತ್ತದೆ. ಕಲಂ 69 ರಡಿ ಸಂಘದವರು ಅಧಿಬಾರ ಪ್ರಕರಣವನ್ನು ದಾಖಲಿಸಿದ್ದಾರೆ. ಕಲಂ 103 ರಡಿ ಆದೇಶಪೂರ್ವ ಆಸ್ತಿ ಜಪ್ತಿಗೆ ನೋಟಿಸ ನೀಡಿ ಕಲಂ 103 (2)ರಡಿ ಅದೇಶ ಪೂರ್ವ ಜಪ್ತಿ ಆದೇಶವನ್ನು ದಿ: 15/06/2022 ರಂದು ಹೊರಡಿಸಲಾಗಿದೆ. ದಿನಾಂಕ:04/11/2022 ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಿಜಯಪುರ ಇವರು ಕಲಂ 68 ರಡಿ ಆದೇಶ ಹೊರಡಿಸಿದ್ದಾರೆ. ಆರೋಪ ಪಟ್ಟಿಯನ್ನು ಜಾರಿ ಮಾಡಿ ದಿ:03/01/2023 ಕ್ಕೆ ವಿಚಾರಣೆ ನಿಗದಿಪಡಿಸಿದೆ. ಆರೋಪಿತನಾದ ಕಾರ್ಯದರ್ಶಿಯು ಮರಣ ಹೊಂದಿದ್ದರಿಂದ ಕ್ರಿಮಿನಲ್ ಪ್ರಕರಣ ದಾಖಲಿಸುವ ಕ್ರಮವನ್ನು ಕೈ ಬಿಡಲಾಗಿದೆ. |
| 61 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಐನಾಪೂರ | 1 | 113.23 | 0 | 0.00 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಕವಲಗಿ ಸಂಘದ ಅಡಿಟ್ ವರದಿ ಸನ್ 2020-21ರನ್ವಯ. ದಿನಾಂಕ:15-10-2022ರಂದು ಕಲಂ 68 ಆದೇಶ ಹೊರಡಿಸಿದ್ದು ಕಲಂ 69 ರಡಿ ಅಧಿಭಾರ ಪ್ರಕರಣ ದಾಖಲಾಗಿ ಪ್ರತಿವಾದಿಗಳ ಆಕ್ಷೇಪಣೆಗಾಗಿ ದಿ:03/01/2023 ಕ್ಕೆ ವಿಚಾರಣೆ ನಿಗದಿಪಡಿಸಿದೆ. |
| 62 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ,ಮನಗೂಳಿ | 0 | 0.00 | 1 | 259.82 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಐನಾಪೂರ ಸಂಘದ ಅಡಿಟ್ ವರದಿ ಸನ್ 2020-21ರನ್ವಯ ಬೆಳಕಿಗಿ ಬಂದಿರುತ್ತದೆ. ದಿನಾಂಕ:23/11/2022ರಂದು ಕಲಂ 68 ಆದೇಶ ಹೊರಡಿಸಿದ್ದು, ಕಲಂ 69 ರಡಿ ಅಧಿಬಾರ ಪ್ರಕರಣ ದಾಖಲಾಗಿದ್ದು ಕಲಂ 103 ರಡಿ ಆದೇಶ ಪೂರ್ವ ಜಪ್ತಿ ನೋಟಿಸು ನೀಡಲಾಗಿದೆ ವಿಚಾರಣೆಯನ್ನು ದಿ:03/01/2023 ಕ್ಕೆ ನಿಗದಿಪಡಿಸಿದೆ |

| | | | | | | | | |
|---|---|---|---|---|---|---|---|---|
| 63 | | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಯರಗಲ್ ಬಿಕೆ | 0 | 0.00 | 1 | 53.63 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಮನಗೂಳಿ ಸಂಘದ ಅಡಿಟ್ ವರದಿ ಸನ್ 2021-22ರನ್ವಯ ಬೆಳಕಿಗೆ ಬಂದಿರುತ್ತದೆ. ದಿನಾಂಕ:14-11-2022ರಂದು ಕಲಂ 68 ಆದೇಶ ಹೊರಡಿಸಿದ್ದು, ಕಲಂ 69 ರಡಿ ಅಧಿಬಾರ ಪ್ರಕರಣ ದಾಖಲಾಗಿದ್ದು ಆರೋಪ ಪಟ್ಟಿ ಜಾರಿ ಮಾಡಲಾಗಿದ್ದು ಆಕ್ಷೇಪಣೆಗಾಗಿ ವಿಚಾರಣೆಯನ್ನು ದಿ: 03/01/2023 ಕ್ಕೆ ನಿಗದಿಪಡಿಸಿದೆ. ಕಲಂ 103(2) ರಡಿ ಆದೇಶಪೂರ್ವ ಜಪ್ತಿ ಆದೇಶ ಹೊರಡಿಸಲಾಗಿದೆ. ಮನಗೂಳಿ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ನಂ:-0033/2022 ದಿ: 16/03/2022 ರಂದು ದಾಖಲಿಸಲಾಗಿದೆ. |
| 64 | ಬಾಗಲಕೋಟೆ | ಪ್ರಾಥಮಿಕ ಕೃಷಿ ಪತ್ತಿ ಸಂಘ ನಿ. ಕಮತಗಿ | 1 | 6.04 | 0 | 0.00 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಯರಗಲ್ ಬಿಕೆ ಇದರ ಸನ್ 2021-22 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಸಂಘದ ಠೇವಣಿಗಳಲ್ಲಿ ರೂ. 3,24,467-00 ಹಾಗೂ ಕೃಷಿ ಸಾಲ ಹಂಚಿಕೆಯಲ್ಲಿ ರೂ. 2,11,830/- ಯಾದಿಗೂ ಹಾಗೂ ಅಡಾವೆಗೂ ವ್ಯತ್ಯಾಸ ಇರುವದಾಗಿ ಹಾಗೂ ಸದರ ವ್ಯತ್ಯಾಸ ಮೊತ್ತಕ್ಕೆ ಸಂಘದ ಮಾಜಿ ಮುಕಾನಿಯಾದ ವಿಠ್ಠಲ ಬಿರಾದಾರ ಇವರು ಜಾವಾಬ್ದಾರರಾಗಿರುತ್ತಾರೆ ಎಂದು ಪ್ರಕರಣ ಬೆಳಕಿಗೆ ಬಂದಿರುತ್ತದೆ. ತದನಂತರ ಸಹಾಯಕ ನಿಬಂಧಕರ ಕಚೇರಿ ಇಂಡಿಯಲ್ಲಿ ಅಧಿಬಾರ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಆಕ್ಷೇಪಣೆ ವಿಚಾರಣೆ ಹಂತವಾಗಿರುತ್ತದೆ ಮುಂದುವರೆದು ಸಿಂದಗಿ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ಸಂಖ್ಯೆ 198/2022 ದಿನಾಂಕ: 10-09-2022 ರಂದು ದಾಖಲಾಗಿರುತ್ತದೆ. |
| 65 | | ಪ್ರಾಥಮಿಕ ಕೃಷಿ ಪತ್ತಿ ಸಂಘ ನಿ. ಇಲಾಳ | 0 | 0.00 | 1 | 110.22 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಕಮತಗಿ ತಾ-ಹುನಗುಂದ ಈ ಸಹಕಾರ ಸಂಘದಲ್ಲಿ ಜರುಗಿದೆ ಎನ್ನಲಾದ ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ವಿಚಾರಣೆ ಜರುಗಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬಾಗಲಕೋಟೆ ಇವರು ಆದೇಶ ಸಂ-ಎಆರ್6/ಕಲಂ64/ ಪಿಕೆಪಿಎಸ್/ ಸಿಆರ್-16/2020-21 ದಿನಾಂಕ-30/12/2020 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64 ರಡಿ ವಿಚಾರಣಾಧಿಕಾರಿಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ್ದು ವರದಿಯ ಸಾರಾಂಶ ತಿಳಿಸಿದ್ದು ತದನಂತರ ಆದೇಶ ಸಂ-ಎಆರ್6/ಕಲಂ64/ ಪಿಕೆಪಿಎಸ್/ ಸಿಆರ್-16/2020-21 ದಿನಾಂಕ-25/05/2022 ರ ಮೇರೆಗೆ ಕಲಂ 68 ರ ಆದೇಶ ಹೊರಡಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. |
| 66 | | ಪ್ರಾಥಮಿಕ ಕೃಷಿ ಪತ್ತಿ ಸಂಘ ನಿ. ಗಂಜಿಹಾಳ | 0 | 0.00 | 1 | 73.15 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಇಲಾಳ ತಾ-ಬಾಗಲಕೋಟೆ ಈ ಸಹಕಾರ ಸಂಘದಲ್ಲಿ ಜರುಗಿದೆ ಎನ್ನಲಾದ ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ವಿಚಾರಣೆ ಜರುಗಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬಾಗಲಕೋಟೆ ಇವರು ಆದೇಶ ಸಂ-ಎಆರ್6/ಕಲಂ64/ ಪಿಕೆಪಿಎಸ್/ ಸಿಆರ್-02/2021-22 ದಿನಾಂಕ-09/08/2021 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64 ರಡಿ ವಿಚಾರಣಾಧಿಕಾರಿಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ್ದು ವರದಿಯ ಸಾರಾಂಶ ತಿಳಿಸಿದ್ದು ತದನಂತರ ಆದೇಶ ಸಂ-ಎಆರ್6/ಕಲಂ64/ ಪಿಕೆಪಿಎಸ್/ ಸಿಆರ್-02/2021-22 ದಿನಾಂಕ-17/08/2022ಕಲಂ 68 ರ ಆದೇಶ ಹೊರಡಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಆರೂಪಿತರು ಕಲಂ 68 ರ ಆದೇಶವನ್ನು ಕಲಂ 106 ರಡಿ ಮೇಲ್ಮನವಿ ಸಲ್ಲಿಸಿದ್ದು, ದಾವೆ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ಬಾಗಲಕೋಟೆಯಲ್ಲಿ ದಾಖಲಾಗಿದೆ |

| | | | | | | | | |
|---|---|---|---|---|---|---|---|---|
| 67 | | ಪ್ರಾಥಮಿಕ ಕೃಷಿ ಪತ್ತಿ ಸಂಘ ನಿ. ಕಂದಗಲ್ | 0 | 0.00 | 1 | 257.14 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಗಂಜೀಹಾಳ ತಾ–ಹುನಗುಂದ ಈ ಸಹಕಾರ ಸಂಘದಲ್ಲಿ ಜರುಗಿದೆ ಎನ್ನಲಾದ ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ವಿಚಾರಣೆ ಜರುಗಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬಾಗಲಕೋಟೆ ಇವರು ಆದೇಶ ಸಂ–ಎಆರ್6/ಕಲಂ64/ ಪಿಕೆಪಿಎಸ್‌ಗಂ/ಸಿಆರ್–11/2021–22 ದಿನಾಂಕ–13/04/2022 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64 ರಡಿ ವಿಚಾರಣಾಧಿಕಾರಿಗಳ್ನು ನೇಮಕಾತಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಪ್ರಸ್ತುತ ವಿಚಾರಣಾಧಿಕಾರಿಗಳು ವಿಚಾರಣೆ ಜರುಗಿಸಿ ದಿ: 09–12–2022 ರಂದು ವರದಿಯನ್ನು ಸಲ್ಲಿಸಿದ್ದು ವರದಿಯ ಸಾರಾಂಶವನ್ನು ತಿಳಿಸುವದು ಬಾಕಿ ಇರುತ್ತದೆ. |
| 68 | | ಶ್ರೀ ಗಂಗಾಧರ ಅರ್ಬನ್ ಕೋ–ಆಪ್ ಕ್ರೆಡಿಟಗ ಸೊಸೈಟಿ ಲಿ ಕಲ್ಲಟ್ಟಿ ತಾ–ರಬಕವಿ–ಬನಹಟ್ಟಿ | 1 | 81.46 | 0 | 0.00 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಕಂದಗಲ್ಲ ತಾ–ಹುನಗುಂದ ಈ ಸಹಕಾರ ಸಂಘದಲ್ಲಿ ಜರುಗಿದೆ ಎನ್ನಲಾದ ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ವಿಚಾರಣೆ ಜರುಗಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬಾಗಲಕೋಟೆ ಇವರು ಆದೇಶ ಸಂ–ಎಆರ್6/ಕಲಂ64/ ಪಿಕೆಪಿಎಸ್‌ಕಂ/ಸಿಆರ್–/ಮಾಅ/2021–22 ದಿನಾಂಕ–06/06/2022 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64 ರಡಿ ವಿಚಾರಣಾಧಿಕಾರಿಗಳ್ನು ನೇಮಕಾತಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಪ್ರಸ್ತುತ ವಿಚಾರಣಾಧಿಕಾರಿಗಳು ವಿಚಾರಣೆ ಕೈಗೊಂಡಿದ್ದು ವಿಚಾರಣಾ ಅಂಶಗಳಿಗೆ ಸಂಬಂಧಿಸಿದವರಿಗೆ ನೋಟೀಸು ನೀಡಲಾಗಿದ್ದು ವಿಚಾರಣೆ ಪ್ರಗತಿಯಲ್ಲಿರುತ್ತದೆ. |
| 69 | | ನಾಮದೇವಶಿಂಪಿ ವಿವಿದೋದ್ದೇಶಗಳ ಸಹಕಾರ ಸಂಘ ನಿ ಬನಹಟ್ಟಿ ತಾ–ರಬಕವಿ–ಬನಹಟ್ಟಿ | 1 | 2.63 | 0 | 0.00 | 0 | ಸದರ ಸಹಕಾರ ಸಂಘದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 63 ರ ಸನ್ 2012–13 ರಿಂಧ 2018–19 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಹಣದುಪುಪಯೋಗ ಆಗಿರುವ ಬಗ್ಗೆ ನಮೂದಾಗಿರುತ್ತದೆ. ಅದರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಜಮಖಂಡಿ ಇವರು ತಮ್ಮ ಕಚೇರಿ ಆಧೇಶ ಸ0–ಎಆರ್8/ಲೆಪ/ಕಲಂ68/ಸಿಆರ್–01/2022–23 ದಿನಾಂಕ–10/11/2022 ರಂದು ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 68 ರ ಮೇರೆಗೆ ಆದೇಶ ಹೊರಡಿಸಿರುತ್ತಾರೆ. |
| 70 | ಧಾರವಾಡ | ಮದಿನಾ ಕೋ–ಆಪ್ ಕ್ರೆಡಿಟ್ ಸೊಸೈಟಿ ನಿ., ಅಳ್ನಾವರ ತಾ:ಜಿ:ಧಾರವಾಡ | 0 | 0.00 | 1 | 32.70 | 0 | ನಾಮದೇವಶಿಂಪಿ ವಿವಿದೋದ್ದೇಶಗಳ ಸಹಕಾರ ಸಂಘ ನಿ ಬನಹಟ್ಟಿ ತಾ–ರಬಕವಿ–ಬನಹಟ್ಟಿ ಈ ಸಹಕಾರ ಸಂಘದಲ್ಲಿ ಜರುಗಿದೆ ಎನ್ನಲಾದ ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ವಿಚಾರಣೆ ಜರುಗಿಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಜಮಖಂಡಿ ಇವರು ತಮ್ಮ ಆದೇಶ ಸಂ– ಎಆರ್8/ ಎಬಿಎನ್/ ಕಲಂ64/ ಪಿಕೆಪಿಎಸ್/ ಸಿಆರ್–28/2018–19 ದಿನಾಂಕ– 12/10/2020 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64 ರಡಿ ವಿಚಾರಣಾಧಿಕಾರಿಗಳ್ನು ನೇಮಕಾತಿ ಮಾಡಿ ಆದೇಶ ಹೊರಡಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ್ದು ವರದಿಯ ಸಾರಾಂಶ ತಿಳಿಸಿದ್ದು ತದನಂತರ ಆದೇಶ ಸಂ–ಎಆರ್8/ ಎಬಿಎನ್/ ಕಲಂ64/ಸಿಆರ್–26/2020–21 ದಿನಾಂಕ–22/04/2022 ರಂಧು ಕಲಂ 68 ರ ಆದೇಶ ಹೊರಡಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಪ್ರಸ್ತುತ ಸದರ ಸಹಕಾರ ಸಂಘದವರು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಅನುಪಾಲನಾ ವರದಿಯ ಪರೀಶಿಲನಾ ಹಂತದಲ್ಲಿ ಇರುತ್ತದೆ. |

| | | | | | | | | |
|---|---|---|---|---|---|---|---|---|
| 71 | ಗದಗ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,ಮಾಡಲಗೇರಿ ತಾ:ರೋಣ | 0 | 0.00 | 1.55 | 0.00 | 0 | ಮದಿನಾ.ಕೋ-ಆಪ್ ಕ್ರೆಡಿಟ್ ಸೊಸೈಟಿ ನಿ., ಅಳ್ನಾವರ ತಾ:ಜಿ:ಧಾರವಾಡ ಇದರ ಹಳಿಯಾಳ ಶಾಖಾ ವ್ಯವಸ್ಥಾಪಕರಿಂದ ರೂ. 32.70 ಲಕ್ಷ ಹಣ ದುರುಪಯೋಗವಾದ ಬಗ್ಗೆ ಸನ್ 2021-22 ಸಾಲಿನ ಲೆಕ್ಕಪರೀಶೋಧನಾ ವರದಿಯಲ್ಲಿ ಕಂಡುಬಂದಿರುತ್ತದೆ. ಸದರಿ ಶಾಖಾ ವ್ಯವಸ್ಥಾಪಕರನ್ನು ದಿ. 01/09/2022 ರ ಆಡಳಿತ ಮಂಡಳಿ ಠರಾವು ಪ್ರಕಾರ ಅಮಾನತುಗೊಳಿಸಿ ದಿ: 07-12-2022 ರಂದು ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು(ಪಟ್ಟಣ ಬ್ಯಾಂಕುಗಳ ವಿಭಾಗ) ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ಸಂಘದವರು ವ್ಯಾಜ್ಯ ಪ್ರಕರಣ ದಾಖಲು ಮಾಡಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ. ಹಾಗೂ ಸದರಿಯವರ ಮೇಲೆ ಸಂಘದವರು ಕ್ರೀಮಿನಲ್ ಗುನ್ನಾ ನಂ 0100/2022 ರಡಿ ಅಳ್ನಾವರ ಪೋಲಿಸ ಠಾಣೆಯಲ್ಲಿ ಎಫ್ಐಆರ್ ದಾಖಲು ಮಾಡಿರುತ್ತಾರೆ. |
| 72 | ಹಾವೇರಿ | ಪ್ರಾ.ಕೃಪತ್ತಿನ ಸಹಕಾರ ಸಂಘ ನಿ., ಹೆಡಿಗೊಂಡ | 0 | 0 | 1 | 90.08 | 0 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,ಮಾಡಲಗೇರಿ ತಾ:ರೋಣ ಈ ಸಂಘದ ಹಣದುರುಪಯೋಗವಾದ ಮೊತ್ತದ ಕುರಿತು ವಿಚಾರಣೆ ನಡೆಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಗದಗ ಉಪ-ವಿಭಾಗ, ಗದಗ ಇವರ ಆದೇಶ ಕ್ರ/ ಎಆರ್-18/ಕಲಂ-64/ಸಿಆರ್-01/2021-22 ದಿನಾಂಕ:03-08-2021 ರ ಆದೇಶದ ಮೇರೆಗೆ ಸಹಕಾರ ಅಭಿವೃದ್ಧಿ ಅಧಿಕಾರಿ, ರೋಣ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಸದರಿಯವರ ವಿಚಾರಣೆಯಲ್ಲಿ ಸಂಘದ ಹಿಂದಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಸನಗೌಡ ಮ ಅಮಾತಿಗೌಡ್ರ, ಇವರು ರೈತರ ಎಂ.ಸಿ ಹಾಗೂ ಸಿ.ಡಿ. ಚೆಕ್ಕುಗಳ ಮೇಲಿನ ಪೋರ್ಜರಿ ಮಾಡಿ ರೂ 1,55,000-00 ಗಳನ್ನು ಹಣದುರುಪಯೋಗ ಮಾಡಿರುತ್ತಾರೆ. ಕಾರಣ, ಸದರಿಯವರ ಮೇಲೆ ಕ್ರಿಮಿನಲ್ ಪ್ರಕರಣವನ್ನು ರೋಣ ಪೋಲೀಸ್ ಠಾಣೆಯಲ್ಲಿ ದಿನಾಂಕ:27-01-2022 ರಂದು ಗುನ್ಹೆ ಸಂಖ್ಯೆ-0021/2022 ರ ಮೇರೆಗೆ ದಾಖಲಿಸಿರುತ್ತಾರೆ. ಸದರಿ ಮೊತ್ತದ ವಸೂಲಿಗೆ ಸಿವಿಲ್ ಕ್ರಮದ ಭಾಗವಾಗಿ ಕಲಂ.69 ರಡಿ ಅಧಿಬಾರ ಅರ್ಜಿಯನ್ನು ದಿ:04-08-2022 ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಗದಗ ಈ ಕಚೇರಿಯಲ್ಲಿ ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ದಿ:15-09-2022 ರಂದು ವಿಚಾರಣಾಯನ್ನು ನಿಗಧಿಪಡಿಸಿ ನೋಟಿಸ ನೀಡಲಾಗಿದ್ದು ವಿಚಾರಣೆಯು ಪ್ರಗತಿ ಹಂತದಲ್ಲಿದೆ. |
| 73 | | ಮಹಿಷಾಸುರ ಮರ್ಧಿಣಿ ಅರ್ಬನ್ ಕೋ-ಆಪ್‌ರೆಟಿವ್ ಲಿ., ರಾಣಿಬೆನ್ನೂರ | 0 | 0 | 1 | 54.53 | 0 | ಪ್ರಾ.ಕೃಪತ್ತಿನ ಸಹಕಾರ ಸಂಘ ನಿ., ಹೆಡಿಗೊಂಡ ಸಂಘದ ಸನ್ 2021-22 ನೇ ಸಾಲಿನ ಲೆಕ್ಕ ಪರೀಶೋಧನಾ ವರದಿಯಲ್ಲಿ ಮಾಜಿ ಮುಖ್ಯ ಕಾರ್ಯದರ್ಶಿ ಸಿದ್ದಪ್ಪಾ ಅಂಬಲಿ ಇವರಿಂದ ಖೊಟ್ಟಿ ಬಿಡಿಪಿ ಸಾಲದಲ್ಲಿ ಅವ್ಯವಹಾರ ಎಸಗಿದ್ದು ಈ ಕುರಿತಂತೆ ಸಂಘದ ಅಧ್ಯಕ್ಷರು ಗುನ್ಹೆ ಸಂಖ್ಯೆ 0063/2022 ದಿ: 18-07-2022 ರಂದು ಕ್ರಿಮಿನಲ್ ಪ್ರಕರಣ ಕಾಗಿನಲೆ ಪೋಲಿಸ ಠಾಣೆಯಲ್ಲಿ ದಾಖಲಿಸಿರುತ್ತಾರೆ ಹಾಗೂ ಕಾಯ್ದೆ ಕಲಂ 69 ರಡಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ ಹಾವೇರಿಯಲ್ಲಿ ವಿಚಾರಣೆಯಲ್ಲಿ ಪಾಟಸವಾಲಿಗೆ ಪ್ರತಿವಾದಿಪರ ವಕೀಲರು ಕಾಲವಕಾಶ ಕೋರಿದ್ದು ಸದರಿ ಪ್ರಕರಣದ ವಿಚಾರಣೆಯ ದಿ:17-01-2023 ರಂದು ಮುಂದುಡಲಾಗಿದೆ. |

| | | | | | | | |
|---|---|---|---|---|---|---|---|
